


**ಸಂಗ್ರಹಯೋಗ್ಯ ಸಂಚಿಕೆ**

ಪ್ರವಾಸದ ತಯಾರಿ ಹೇಗಿರಬೇಕು ಎಂಬುದನ್ನು ಮುಖಪುಟ ಲೇಖನದಲ್ಲಿ ಅಂಜಲಿ ರಾಮಣ್ಣ ಸೂಕ್ತವಾಗಿ ಕಟ್ಟಿಕೊಟ್ಟಿದ್ದಾರೆ. ಇದೊಂದು ಸಂಗ್ರಹಯೋಗ್ಯ ಸಂಚಿಕೆ.

-ಸಂಜಯಕುಮಾರ್, ಕೋಣನಕೇರಿ/ ಕೊ.ಸು.ನರಸಿಂಹಮೂರ್ತಿ, ಮೈಸೂರು/ ನಿತ್ಯ ಎಸ್.ಮೂಡಬಿದಿರೆ, ರತ್ನಗಿರಿ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

**ಅಭಿಪ್ರಾಯಕ್ಕೆ ಸಹಮತ**

ಮಾರ್ಚ್ ತಿಂಗಳಲ್ಲಿ ಉತ್ತರ ಭಾರತದ ಯಶಸ್ವೀ ಪ್ರವಾಸ ಮಾಡಿ ವಾಪಸಾಗಿರುವ ನಾನು ಹಾಗೂ ನನ್ನ ಎಲ್ಲ ಮಿತ್ರರು ಅಂಜಲಿ ರಾಮಣ್ಣನವರ ಅಭಿಪ್ರಾಯ ಉಳ್ಳವರಾಗಿದ್ದಾರೆ!

-ಕೆ.ಕೆ. ಜಯಚಂದ್ರಗುಪ್ತ, ಹಾಸನ

**'ಸುಧಾ' ಇದೆ, ಸಾಕು**

ಪ್ರವಾಸದ ಸುಂದರ ಚಿತ್ರಗಳನ್ನು ನೋಡಿ ಹೋಗಲಾಗುತ್ತಿಲ್ಲವಲ್ಲ ಎಂದು ಖೇದವಾಯಿತು. ಆದರೇನಾಯಿತು? ಕೈಯಲ್ಲಿ 'ಸುಧಾ' ಪತ್ರಿಕೆ ಇದೆಯಲ್ಲ. ಅದರಲ್ಲಿ ಬಂದ ಪ್ರವಾಸ ಲೇಖನಗಳನ್ನು ಎರಡೆರಡು ಸಲ ಓದಿ ಸಂಗ್ರಹಿಸಿ ಇಟ್ಟುಕೊಳ್ಳುವುದೇ ವಿಹಿತ ಎನಿಸಿತು.

-ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

**ಮಾರ್ಮಿಕ ಕಾರ್ಟೂನ್**

ಕರ್ನಾಟಕ ಲೋಕಾಯುಕ್ತದ ಕುರಿತ ಮಹಮ್ಮದ್ ಅವರ ಕಾರ್ಟೂನ್ ತುಂಬಾ ಮಾರ್ಮಿಕವಾಗಿತ್ತು.

-ಎಂ.ಮಲ್ಲಯ್ಯ, ಶ್ರೀರಾಂಪುರ

**ಒಡಲ ಬಗೆದ ಖೂಳರು**

'ಭುವಿಯ ಒಡಲು ಬಗೆದು' ಶಿಕಾಕು ವಿಚಾರ ಲಹರಿಯ ಕಳಕಳಿ ಎಲ್ಲರಲ್ಲೂ ಇರಲೇಬೇಕು.

-ಪ್ರೊ. ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ

**ಭಾರತಕ್ಕೆ ಪದಕ ಗ್ಯಾರಂಟಿ!**

'ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಪದಕ ಸಿಗಬಹುದೇ?' ಓದಿದೆ. ಭಾರತದ ಸ್ಪರ್ಧಿಗಳಲ್ಲಿ ಕುಸ್ತಿ, ಶೂಟಿಂಗ್, ಬಾಕ್ಸಿಂಗ್, ಓಟ, ಟೆನಿಸ್, ಅರ್ಚರಿ, ಈಜು... ಇತ್ಯಾದಿಗಳಲ್ಲಿ ದಾಖಲೆ ನಿರ್ಮಿಸುವ ಪ್ರತಿಭಾವಂತರಿದ್ದಾರೆ. ಹಾಗಾಗಿ ಭಾರತಕ್ಕೆ ಪದಕ ಸಿಗಬಹುದಾ ಎಂಬ ಅನುಮಾನವೇ ಬೇಡ.

-ನಾರಾಯಣ ಯಾಜಿ, ಶಿರಾಲಿ

**'ತಂಗಿಯ ರಂಪಾಟ' ಒಳ್ಳೆಯ ಕವನ**

'ಎಳೆಯರ ಅಂಗಳ'ದಲ್ಲಿ ಪ್ರಕಟವಾಗಿರುವ 'ತಂಗಿಯ ರಂಪಾಟ' ಕವನ ತುಂಬಾ ಚೆನ್ನಾಗಿದೆ. ಚಿತ್ರ ಸೊಗಸಾಗಿದೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ

**ಸೊಗಸಾದ ಕಥೆ**

ಗುರುನಾಥ ಅಕ್ಕಣ್ಣ ನಮ್ಮ ಭಾಗದ ಅತ್ಯುತ್ತಮ ಕಥೆಗಾರ. 'ಅಮೃತದೊಳು ವಿಷ ಬೆರೆದಂತೆ' ಎಂಬ ಅವರ ಕಥೆ ಮನೋಜ್ಞವಾಗಿತ್ತು. ಬೀದರ ಭಾಗದ ಆಡುಭಾಷೆ ಕಥೆಗೆ ಮೆರಗು ತಂದಿತ್ತು.

-ಆರ್.ಎಸ್.ತಿಮ್ಮಾಪೂರ, ಗುಲಬರ್ಗಾ

**ಪ್ರಶಸ್ತಿಗೆ ಪುಸ್ತಕಗಳ ಆಹ್ವಾನ**

ಅಮರಮ್ಮ ಚೆನ್ನಬಸವಪ್ಪ ಬೆಟ್ಟದೂರು ಪ್ರತಿಷ್ಠಾನವು ವಚನ ಸಾಹಿತ್ಯ ಹಾಗೂ ವಿಚಾರ ಸಾಹಿತ್ಯದ ವಿಶ್ಲೇಷಣಾತ್ಮಕ ಕೃತಿಗಳನ್ನು ಪ್ರಶಸ್ತಿಗೆ ಆಹ್ವಾನಿಸಿದೆ. ಏಪ್ರಿಲ್ 30 ರೊಳಗಾಗಿ 2011ರಲ್ಲಿ ಮಾತ್ರ ಪ್ರಕಟಿತವಾದ ಕೃತಿಗಳ 3 ಪ್ರತಿಗಳನ್ನು ಅಲ್ಲಮಪ್ರಭು ಬೆಟ್ಟದೂರು, ಅಮರಚೇತನ, ಕಲ್ಯಾಣನಗರ, ಕಿನ್ನಾಳ ರಸ್ತೆ, ಕೊಪ್ಪಳ-583231 ಇಲ್ಲಿಗೆ ಕಳಿಸಲು ಕೋರಿದೆ. ವಿವರಕ್ಕೆ: 9844049205

**ಕಟ್ಟೀಮನಿ ಪತ್ರ ಕಳಿಸಿಕೊಡಿ**

ಕರ್ನಾಟಕ ಸರಕಾರವು ಬೆಳಗಾವಿಯಲ್ಲಿ ಡಾ. ಎಂ.ಎಂ. ಕಲಬುರ್ಗಿ ಅಧ್ಯಕ್ಷತೆಯಲ್ಲಿ 'ಬಸವರಾಜ ಕಟ್ಟೀಮನಿ ಪ್ರತಿಷ್ಠಾನ' ಆರಂಭಿಸಿದೆ.

ಈ ಪ್ರತಿಷ್ಠಾನದಿಂದ ಕಟ್ಟೀಮನಿಯವರು ಬದುಕಿದ್ದಾಗ ನಾಡಿನ ಹಲವಾರು ಬರಹಗಾರರಿಗೆ, ವಿದ್ವಾಂಸರಿಗೆ, ರಾಜಕಾರಣಿಗಳಿಗೆ, ಪತ್ರಿಕೆಗಳಿಗೆ ಬರೆದ ಪತ್ರಗಳನ್ನು ಒಂದು ಗ್ರಂಥದ ರೂಪದಲ್ಲಿ ತರುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಯಾರ ಹತ್ತಿರವಾದರೂ ಅವರು ಬರೆದ ಪತ್ರಗಳಿದ್ದರೆ ಅವುಗಳ ನೆರಳಚ್ಚಿನ (ಝೆರಾಕ್ಸ್) ಪ್ರತಿಗಳನ್ನು ಶಿವಕುಮಾರ ಕಟ್ಟೀಮನಿ, ಬಸವನಗರ, ಘಟಪ್ರಭಾ-591306. ತಾ. ಗೋಕಾಕ, ಜಿ. ಬೆಳಗಾವಿ. ಕಳಿಸಿ ಕೊಡಲು ವಿನಂತಿಸಲಾಗಿದೆ. ಪತ್ರ ಕಳಿಸಿದವರ ಹೆಸರುಗಳನ್ನು ಆಯಾ ಪತ್ರಗಳ ಜೊತೆಗೆ ಪ್ರಕಟಿಸಲಾಗುವುದು ಎಂದು ಸಂಪಾದಕ ಬಸವರಾಜ ಸಾದರ ತಿಳಿಸಿದ್ದಾರೆ.




ಗುರೂಜಿ
ಕೃಷ್ಣಾನಂದ

ಬೆಳಕಿನಿಂದ ಕ್ರಾಂತಿ
ನಿಮ್ಮಿಂದಲೇ ಆರಂಭ



ಪ್ರತಿದಿನ ಬೆಳಕನ್ನು ಚಾನಲ್ ಮಾಡಿ
ಭ್ರಷ್ಟಾಚಾರ, ಹಿಂಸಾಚಾರಗಳನ್ನು ದೂರಮಾಡಿ

ಬೆಳಕೇ ಶಕ್ತಿ, ಬೆಳಕೇ ಭಗವಂತ
ನಿಮ್ಮ ತಲೆಯ ಮೇಲೆ ಬೆಳಕನ್ನು ಕಲ್ಪಿಸಿಕೊಳ್ಳಿ, ಅದು ನಿಮ್ಮ ಮೂಲಕ ಹರಿದು ಎಲ್ಲೆಡೆ ಹರಡಲಿ

ಸೋಮವಾರ, 7ನೇ ಮೇ 2012
ನಿಮ್ಮದೇ ಸ್ಥಳದಿಂದ
ಲೈಟ್ ಚಾನಲ್ ಸಮ್ಮೇಳನದಲ್ಲಿ ಪಾಲ್ಗೊಳ್ಳಿ

ಸಾಯಂಕಾಲ 7:45 ರಿಂದ 15 ನಿಮಿಷಗಳ ಕಾಲ
ಬೆಳಕನ್ನು ಚಾನಲ್ ಮಾಡಿ

ಸಮ್ಮೇಳನದ ವೆಬ್‌ಕಾಸ್ಟ್, ಸಾಯಂಕಾಲ 7 ರಿಂದ

www.lightchannels.com/RevolutionByLight

ಮಾನಸ ಫೌಂಡೇಶನ್(ರಿ.)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರಸ್ತೆ), ಬೆಂಗಳೂರು 560077.
✆ 080-2846 5280, 099000 75280 ✉ info@lightchannels.com, www.lightchannels.com